ಇರಲೇ ಇಲ್ಲ. ಬೆಂಗಳೂರಿಗೆ ಬಂದಾಗಲೆಲ್ಲ ನಮ್ಮ ಮನೇಲೆ ಅವನು ಇರೋದು. ಹೋಟೆಲ್ ರೂಮಿನಲ್ಲಿ ಅವನ ಹೆಸರ್‍ಯಾಕಿತ್ತೋ ಗೊತ್ತಿಲ್ಲ. ಹುಡುಗೀರ ಜೊತೆ ಮಾತನಾಡೋಕೇ ನಾಚ್ಕೊತಾನೆ. ಅವನು ಕೊಲೆ ಪ್ರಯತ್ನ ಮಾಡಿರೋಕೆ ಸಾಧ್ಯಾನೇ ಇಲ್ಲ. ನೀವು ಸಹಾಯ ಮಾಡೋ ತನಕ ನಿಮ್ಮ ಕಾಲು ಬಿಡೋಲ್ಲ" ಎಂದು ಕಣ್ಣೀರಿಡುತ್ತಾ ಮತ್ತೆ ಕಾಲು ಹಿಡಿಯಲು ಬಂದಳು. "ನೋಡ್ರೀ... ನೀವು ಕಣ್ಣೀರು ಸುರಿಸೋದು ನೋಡೋಕಾಗಲ್ಲ. ನನ್ನ ಧಾರಾವಾಹಿಯ ಎಲ್ಲ ಪಾತ್ರಗಳೂ ಸೇರಿ ಸುರಿಸುವಷ್ಟು ಕಣ್ಣೀರನ್ನ ನೀವೊಬ್ರೇ ಸುರಿಸ್ತಿದೀರ. ನೀವು ನಮ್ಮ ಪಾಂಡು ಜತೆ ಹೋಗಿ ಅವನು ನಮ್ಮ ಕ್ರಿಮಿನಲ್ ಲಾಯರ್ ಅಂಜನಾಸುತ ಅಂತ ಇದ್ದಾರೆ ಅವ್ರ ಹತ್ರ ಕರ್‍ಕೊಂಡು ಹೋಗ್ತಾನೆ. ಆ ಲಾಯರ್‍ರು ನಿಮ್ಮ ತಮ್ಮನನ್ನ ಭೇಟಿ ಮಾಡಿ ಎಲ್ಲ ವಿವರ ತಿಳಿದುಕೊಂಡು ಜಾಮೀನಿನ ಮೇಲೆ ನಿಮ್ಮ ತಮ್ಮನನ್ನು ಬಿಡಿಸೋಕೆ ಪ್ರಯತ್ನ ಮಾಡ್ತಾರೆ" ಎಂದು ಹೇಳಿ ಹೊರಟರು ಲಾಯರ್ ಸಿ.ಎಸ್.ಪಿ.

ಸಿ.ಎಸ್.ಪಿ. ಅವರ ಸಹಾಯಕ ಪಾಂಡು ಹೇಮಾಮಾಲಿನಿ ದ್ರಾಕ್ಷೀಪುರ್ ಅವರನ್ನು ಕ್ರಿಮಿನಲ್ ಲಾಯರ್ ಅಂಜನಾಸುತ ಅವರ ಆಫೀಸಿಗೆ ಕರೆದುಕೊಂಡು ಹೋದ. ಅಲ್ಲಿ ಹೆಚ್ಚು ಕಡಿಮೆ ಇದೇ ಸೀನ್ ರಿಪೀಟ್ ಆಯಿತು. ಕ್ರಿಮಿನಲ್ ಲಾಯರ್ ಅಂಜನಾಸುತ ಅವರು ತಮಗೆ ಬೇಕಾದ ಮಾಹಿತಿಯನ್ನೆಲ್ಲಾ ಆಕೆಯಿಂದ ಪಡೆದುಕೊಂಡರು. ಮೂರನೇ ದಿನ ಪೊಲೀಸರು ಸುನೀಲ್ ಮನೋಹರ್ ದ್ರಾಕ್ಷಿಪುರ್‌ನನ್ನು ಕೋರ್ಟಿಗೆ ಹಾಜರು ಪಡಿಸಿದರು. ಜಡ್ಜ್ ಸಾಹೇಬರು "ಏನ್ರೀ ಇದು ಕೇಸು" ಎಂದು ಸರ್ಕಾರಿ ವಕೀಲರನ್ನು ಕೇಳಿದರು.

"ಮೈ ಲಾರ್ಡ್ ಈ ವ್ಯಕ್ತಿ ಸುನೀಲ್ ಮನೋಹರ್ ದ್ರಾಕ್ಷಿಪುರ್ ಅಂತ ರುದ್ರಾಕ್ಷಿಪುರದ ಒಂದು ಖಾಸಗೀ ಸಂಸ್ಥೆಯಲ್ಲಿ ಉದ್ಯೋಗ ಮಾಡುತ್ತಿದ್ದಾನೆ. ಕಚೇರಿ ಕೆಲಸದ ಮೇಲೆ ಆಗಸ್ಟ್ 18ನೇ ತಾರೀಕು ಬೆಂಗಳೂರಿಗೆ ಬಂದಿದ್ದಾನೆ. ಇಲ್ಲಿ ಮೆಜೆಸ್ಟಿಕ್ ಬಳಿಯ ಸುಂದರಿ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದಾನೆ. ಅದೇ ದಿನ ರಾತ್ರಿ 7.15ರ ಸುಮಾರಿಗೆ ಆ 180ನೇ ನಂಬರಿನ ರೂಮಿನಲ್ಲಿ ಸುಮಾರು 28 ವರ್ಷ ಪ್ರಾಯದ ಒಬ್ಬ ಯುವತಿ ಅರೆ ಪ್ರಜ್ಞಾವಸ್ಥೆಯಲ್ಲಿ ಬಿದ್ದಿರುವುದು ರೂಂ ಬಾಯ್‌ನ ಗಮನಕ್ಕೆ ಬಂದಿದೆ. ಕೂಡಲೇ ಆಕೆಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಆಕೆಗಿನ್ನೂ ಪ್ರಜ್ಞೆ ಬಂದಿಲ್ಲ. ಐ.ಸಿ.ಯೂ.ನಲ್ಲಿಯೇ ಇದ್ದಾಳೆ. ಆ 180ನೇ ನಂಬರಿನ ಕೋಣೆಯಲ್ಲಿ ಈ ಸುನೀಲ್ ಮನೋಹರ ದ್ರಾಕ್ಷಿಪುರ್ ಎಂಬ ಆಪಾದಿತನ ಬೆರಳಿನ ಗುರುತು ಇರುವ ಚಾಕು, ಫೋರ್ಕ್ ಹಾಗೂ ಗ್ಲಾಸ್‌ಗಳು ಸಿಕ್ಕಿವೆ. ಈತನನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಈತನಿಂದ ಯಾವುದೇ ಸರಿಯಾದ ಉತ್ತರ ಸಿಗುತ್ತಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಜ್ಞೆ ಕಳೆದುಕೊಂಡು ಐ.ಸಿ.ಯೂನಲ್ಲಿರುವ ಯುವತಿ ತನಗೆ ಪರಿಚಯವೇ ಇಲ್ಲ ಎಂದು ಆಪಾದಿತ ಹೇಳುತ್ತಿದ್ದಾನೆ. ಪರಿಚಯವೇ ಇಲ್ಲದ ಯುವತಿ ಈತನ ಕೋಣೆಗೆ ಏಕೆ ಬಂದಳು? ಆ ಯುವತಿ ಯಾರು? ಮುಂತಾದ ವಿಚಾರಗಳ ಬಗೆಗೆ, ಆಕೆಯ ಮೇಲೆ ನಡೆದಿರಬಹುದಾದ ಕೊಲೆಯ ಯತ್ನದ ಬಗ್ಗೆ ಇನ್ನೂ ಹೆಚ್ಚಿನ ತನಿಖೆಗಾಗಿ ಈತನನ್ನು ಪೊಲೀಸರ ವಶಕ್ಕೆ ಒಪ್ಪಿಸಬೇಕು. ಇವನನ್ನು ಜಾಮೀನಿನ ಮೇಲೆ ಬಿಟ್ಟರೆ ಸಾಕ್ಷ್ಯಗಳನ್ನು ನಾಶಮಾಡಬಹುದು. ಹಾಗಾಗಿ ಈತನಿಗೆ ಜಾಮೀನು ಕೊಡಬಾರದು" ಎಂದು ಸರ್ಕಾರಿ ವಕೀಲರು ವಾದ ಮಂಡಿಸಿದರು.

ಜಡ್ಜ್ ಸಾಹೇಬರು "ಈ ಆಪಾದಿತನ ಪರವಾಗಿ ಯಾರು ವಾದ ಮಂಡುಸ್ತಿರಪ್ಪ?'' ಎಂದು ಕೇಳಿದಾಗ ಖ್ಯಾತ ಕ್ರಿಮಿನಲ್ ಲಾಯರ್ ಅಂಜನಾಸುತ ಎದ್ದು ನಿಂತರು.

"ಮೈ ಲಾರ್ಡ್, ನನ್ನ ಕಕ್ಷಿದಾರರಾದ ಸುನೀಲ್ ಮನೋಹರ ದ್ರಾಕ್ಷಿಪುರ್ ಪರವಾಗಿ ನಾನು